108

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 79 ಎಂಆರ್‌ಆರ್ 02

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 30.8.03.

## ಸುತ್ತೋಲೆ

ವಿಷಯ: ಪಹಣಿ ಪತ್ರಿಕೆಗಳಲ್ಲಿ ಸಾಗುವಳಿದಾರನ ಬೆಳೆ ವಿವರಗಳನ್ನು ಪ್ರತ್ಯೇಕವಾಗಿ ಬರೆಯುವ ಕುರಿತು.
ಉಲ್ಲೇಖ: ಪತ್ರ ಸಂಖ್ಯೆ: ಕಂಇ 60 ಎಂಆರ್‌ಆರ್ 03 ದಿನಾಂಕ 24.1.2003.

ಪಹಣಿ ಪತ್ರಿಕೆಗಳಲ್ಲಿ ಸಾಗುವಳಿದಾರನ ಬೆಳೆ ವಿವರಗಳನ್ನು ಒಂದು ಸರ್ವೆ ನಂಬರಿಗೆ ಒಟ್ಟಾಗಿ ಬರೆಯುವ ಬದಲು ಪ್ರತ್ಯೇಕವಾಗಿ ಬರೆಯಲಾಗುತ್ತಿದೆಯೆ ಎಂಬುದನ್ನು ತಿಳಿಸುವಂತೆ ಕೋರಿ ಮೇಲೆ ಉಲ್ಲೇಖಿತ ಪತ್ರದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರದಿಂದ ಪತ್ರ ಬರೆಯಲಾಗಿತ್ತು. ಈ ಪತ್ರಕ್ಕೆ ಬಾಗಲಕೋಟೆ, ಮಂಡ್ಯ, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ, ಹಾವೇರಿ, ಬಿಜಾಪುರ, ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಂದ ಉತ್ತರ ಬಂದಿರುತ್ತದೆ. ಸಾಗುವಳಿದಾರನ ಬೆಳೆ ವಿವರಗಳನ್ನು ಪ್ರತ್ಯೇಕವಾಗಿ ಬರೆಯುವುದು ಅತ್ಯಗತ್ಯವೆಂದು ಎಲ್ಲಾ ಜಿಲ್ಲಾಧಿಕಾರಿಗಳು ಅಭಿಪ್ರಾಯ ಪಟ್ಟಿರುತ್ತಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇತ್ತೀಚೆಗೆ ಬೆಳೆ ವಿಮಾ ಯೋಜನೆಯನ್ನು ಪರಿಶೀಲಿಸಿದಾಗ ಗ್ರಾಮ ಲೆಕ್ಕಾಧಿಕಾರಿಗಳು ಬೆಳೆ ವಿಮಾ ದೃಢೀಕರಣ ಪತ್ರದ ಭಾಗವಾಗಿ ರೈತರಿಗೆ ನೀಡುತ್ತಿರುವ ಬೆಳೆ ವಿವರಗಳಿಗೂ ಮತ್ತು ಭೂಮಿ ಡಾಟಾಬೇಸ್‌ನಲ್ಲಿರುವ ವಿವರಗಳಿಗೂ ವ್ಯತ್ಯಾಸ ಇರುವುದನ್ನು ಗಮನಿಸಿರುತ್ತಾರೆ. ಬಹಳಷ್ಟು ತಾಲೂಕುಗಳಲ್ಲಿ ಸರ್ವೆ ನಂಬರ್‌ವಾರು ಎಲ್ಲಾ ಸಾಗುವಳಿದಾರರಿಗೂ ಒಟ್ಟಾಗಿ ಬೆಳೆ ವಿವರಗಳನ್ನು ಬರೆಯಲಾಗುತ್ತಿದೆ ಎಂಬುದನ್ನು ಸಹ ಗಮನಿಸಿರುತ್ತಾರೆ. ಬೆಳೆ ವಿಮೆ ಆಗಿರುವಂತಹ ಬೆಳೆಗಳ ವಿವರಗಳನ್ನು ಬ್ಯಾಂಕ್‌ಗಳಿಗೆ ಪ್ರತಿಯೊಬ್ಬ ರೈತನಿಗೂ ಪ್ರತ್ಯೇಕವಾಗಿ ನೀಡಬೇಕಾಗಿರುವುದರಿಂದ ಕಂದಾಯ ಇಲಾಖೆಯು ಬೆಳೆ ವಿವರಗಳನ್ನು ಪ್ರತಿ ಸಾಗುವಳಿದಾರನಿಗೆ ಪ್ರತ್ಯೇಕವಾಗಿ ಬರೆಯಲು ಕ್ರಮ ಕೈಗೊಳ್ಳಬೇಕೆಂದು ಕಂದಾಯ ಇಲಾಖೆಗೆ ಸೂಚನೆ ನೀಡಲಾಗಿದೆ.

ಮುಖ್ಯ ಕಾರ್ಯದರ್ಶಿಗಳ ಮೇಲಿನ ನಿರ್ದೇಶನದನ್ವಯ ಮತ್ತು ಜಿಲ್ಲಾಧಿಕಾರಿಗಳ ಅಭಿಪ್ರಾಯದನ್ವಯ ಮುಂದಿನ ಋತುವಿನಿಂದ ಬೆಳೆಗಳ ವಿವರಗಳನ್ನು ಪ್ರತ್ಯೇಕವಾಗಿ ಸಾಗುವಳಿದಾರರ-ವಾರು ಬರೆಯತಕ್ಕದ್ದು ಎಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಭೂಮಿ ತಂತ್ರಾಂಶದಲ್ಲಿ ಎಲ್ಲಾ ಸಾಗುವಳಿದಾರರಿಗೂ ಒಂದು ಸರ್ವೆ ನಂಬರಿನಲ್ಲಿ ಒಟ್ಟಾಗಿ ಬೆಳೆಗಳನ್ನು ಬರೆಯುವುದಕ್ಕೆ ಅವಕಾಶವಿರುವುದಿಲ್ಲ. ಗ್ರಾಮ ಲೆಕ್ಕಾಧಿಕಾರಿಗಳು 2003-04 ರ ಖರೀಫ್ ಬೆಳೆಗಳ ವಿವರಗಳನ್ನು ದಾಖಲಿಸುವಾಗ ಸಾಗುವಳಿದಾರರ-ವಾರು ಸ್ಪಷ್ಟವಾಗಿ ದಾಖಲಿಸಬೇಕು. ಒಂದು ಸರ್ವೆ ನಂಬರಿನಲ್ಲಿ ಎಲ್ಲಾ ಸಾಗುವಳಿದಾರರಿಗೂ ಒಟ್ಟಾಗಿ ಬೆಳೆ ವಿವರಗಳನ್ನು ದಾಖಲಿಸಲು ಭೂಮಿ ತಂತ್ರಾಂಶವು ಅನುವು ಮಾಡುವುದಿಲ್ಲ.

Stencil

ಭೂಮಿ ವ್ಯವಸ್ಥೆಯಲ್ಲಿ ಮುಂದಿನ ದಿನಗಳಲ್ಲಿ ಬೆಳೆಗಳ ದಾಖಲಾತಿಯಲ್ಲಿ ಯಾವುದೇ ಗೊಂದಲ ಇಲ್ಲದಿರಲು ಎಲ್ಲಾ ಗ್ರಾಮ ಲೆಕ್ಕಾಧಿಕಾರಿಗಳಿಗೂ ಮೇಲಿನ ಅಂಶವನ್ನು ತಿಳಿಯಪಡಿಸುವುದು ಅತ್ಯಾವಶ್ಯಕ. ಯಾವುದೇ ತಾಲೂಕು ಬೆಳೆಗಳನ್ನು ಸಾಗುವಳಿದಾರರ-ವಾರು ದಾಖಲಿಸಲು ತಪ್ಪಿದ್ದಲ್ಲಿ ಅದನ್ನು ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತರಲಾಗುವುದು.

ಈ ಸುತ್ತೋಲೆಯು ಕಂದಾಯ ಇಲಾಖೆ ಇಂಟರ್‌ನೆಟ್ ಸೈಟ್ http://www.revdept.kar.nic.in ನಲ್ಲೂ ಲಭ್ಯವಿದೆ.

(ರಾಜೀವ್ ಚಾವ್ಲಾ)
ವಿಶೇಷ ಕಾರ್ಯದರ್ಶಿ (ಭೂಮಿ)
ಕಂದಾಯ ಇಲಾಖೆ

ಎಲ್ಲಾ ಜಿಲ್ಲಾಧಿಕಾರಿಗಳಿಗೆ. ನಂ. ಆರ್ ಆರ್ ಬಿ (ಸಿ) 13/03-04

ಪ್ರತಿ ಕ್ರಮಕ್ಕಾಗಿ ರವಾನಿಸಿದೆ.

ತಹಶೀಲ್ದಾರ್
ತಾಲ್ಲೂಕು

ನಂ. ಆರ್‌ಆರ್‌ಬಿ (ಪ್ರ) 700 / 03-04